6) ಮಂಗಳೂರಿನ ಬಸ್ ನಿಲ್ದಾಣಕ್ಕೆ ಕಾಂಕ್ರೀಟ್ ಹಾಕುವುದು.

ಶ್ರೀ ಬ್ಲೇಸಿಯಸ್ ಎಂ ಡಿಸೌಜ — ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ (ಬಜೆಟ್ ಅಧಿವೇಶನ) ನನ್ನ ಪ್ರಶ್ನೆಗೆ ಉತ್ತರಿಸುವ ಸಂದರ್ಭದಲ್ಲಿ ಮಂಗಳೂರಿನ ಬಸ್ ನಿಲ್ದಾಣಕ್ಕೆ ಕಾಂಕ್ರೀಟ್ ಹಾಕಿಸಿಕೊಡುವುದಾಗಿ ಸದನದಲ್ಲಿ ಭರವಸೆ ನೀಡಲಾಗಿದ್ದಿತು. ಆದರೆ ಈವರೆಗೂ ಆ ಬಗ್ಗೆ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದ ಪ್ರಯಾಣಿಕರಿಗೆ ಅದರಲ್ಲೂ ವಿಶೇಷವಾಗಿ ಮಳೆಗಾಲದಲ್ಲಿ ಬಹಳ ತೊಂದರೆಯಾಗಿರುವುದರಿಂದ ಮಳೆಗಾಲ ಪ್ರಾರಂಭವಾಗುವುದರೊಳಗೆ ಸದರಿ ಕೆಲಸವನ್ನು ಮಾಡಿಸಿ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲವನ್ನು ತಪ್ಪಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಬಸ್ ನಿಲ್ದಾಣ ಹೊಸದಾಗಿ ಪ್ರಾರಂಭ ಆಗಿರುವುದರಿಂದ ಯಾರೂ ಅಲ್ಲಿ ಶೆಲ್ಟರ್ ಹಾಕಿಲ್ಲ. ಶೆಲ್ಟರ್ ಆಗದೆ ಕಾರಣ ಕಾಂಕ್ರೀಟ್ ಹಾಕಿಲ್ಲ. ಕಾಂಕ್ರೀಟ್ ಹಾಕಿಸುವುದಕ್ಕೋಸ್ಕರವಾಗಿ ಬಜೆಟ್‌ನಲ್ಲಿ ಹಣವನ್ನು ಇಡಲಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಕೆ.ಎಸ್.ಆರ್.ಟಿ.ಸಿ.ಗೆ ಹಣವನ್ನು ಇಟ್ಟಿರುವುದರಿಂದ ಶೆಲ್ಟರ್ ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು.—ಶ್ರೀ ಎಂ. ಚನ್ನಪ್ಪ, ಗೈರು ಹಾಜರಿ.

7) ರಾಣೇಬೆನ್ನೂರು ಮಾಗೋಡು ರಸ್ತೆಯಲ್ಲಿದ್ದ ಗುಡಿಸಲುಗಳನ್ನು ಕಿತ್ತುಹಾಕಿಸಿರುವುದು.

ಶ್ರೀ ಕೆ. ಬಿ. ಕೋಳಿವಾಡ.— ಮಾನ್ಯ ಅಧ್ಯಕ್ಷರೇ, ರಾಣೇಬೆನ್ನೂರ ನಗರದಲ್ಲಿ ಕೋರ್ಟಿನ ಹಿಂಭಾಗದಲ್ಲಿ ಮಾಗೋಡ ರಸ್ತೆಯ ಬಾಜುಕ್ಕೆ ಇರುವ ಸರಕಾರಿ ಜಾಗದಲ್ಲಿ ಸ ಮಾರು ನೂರಾರು ಬಡಜನರ ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿದ್ದರು. ರಾಣೇಬೆನ್ನೂರು ತಹಶೀಲ್ದಾರರು ಆ ಗುಡಿಸಲುಗಳನ್ನು ಕೀಳಿಸುವ ತಯಾರಿಯಲ್ಲಿದ್ದಾಗ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಬೇಟಿಯಾಗಿ ಸದರಿ ಗುಡಿಸಲುಗಳನ್ನು ಕೀಳಿಸದ ಹಾಗೆ ತಡೆಯಾಜ್ಞೆಯನ್ನು ಪಡೆದು ಜಿಲ್ಲಾಧಿಕಾರಿಗಳಿಗೆ ಕಳಿಸಿದ್ದಲ್ಲದೆ ಅವರಿಗೆ ದೂರವಾಣಿಯ ಮುಖೇನ ತಿಳಿಸಲಾಗಿತ್ತು. ಆದರೂ ಸಹ ತಹಶೀಲ್ದಾರ ರಾಣೇಬೆನ್ನೂರರು ಅವರು ತಮಗೆ ತಡೆಯಾಜ್ಞೆ ತಲುಪಿಲ್ಲವೆಂಬ ನೆಪ ಹೇಳಿ ಅವೆಲ್ಲವುಗಳನ್ನು ಕಿತ್ತು ಹಾಕಿಸಿದರು. ಈ ಎಲ್ಲಾ ಬಡವರು ತಾಲ್ಲೂಕು ಆಫೀಸಿನ ಮುಂದೆ ಸುಮಾರು ಮೂರು ತಿಂಗಳವರೆಗೆ ಸತ್ಯಾಗ್ರಹ ಮಾಡಿದರು ಈಗ ಈ ಬಡವರು ಬೀದಿ ಪಾಲಾಗಿದ್ದಾರೆ. ಆದ್ದರಿಂದ ಸದರೀ ಜಾಗವನ್ನು ಈ ಬಡವರಿಗೂ ಕೂಡಲೇ ಮಂಜೂರು ಮಾಡಿಕೊಡಬೇಕೆಂದು ವಸತಿ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ ಚಂದ್ರಶೇಖರಿರ್ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಇದು ಸರ್ಕಾರದ ಜಾಗ ಮತ್ತು ರೆವಿನ್ಯೂ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮವಾಗಿದೆ. ಇದು ನಮಗೆ ಅನ್ವಯಿಸುವುದಿಲ್ಲ. ಆದರು ರೆವಿನ್ಯೂ ಮಿನಿಸ್ಟರ್‌ರವರ ಗಮನಕ್ಕೆ ತಂದು ಅವರಿಂದ ಸೂಕ್ತ ಉತ್ತರವನ್ನು ಒದಗಿಸಿಕೊಡುತ್ತೇನೆಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಶ್ರೀ ವಿನಯ ಕುಮಾರ್ ಸೊರಕೆ (ಗೈರು ಹಾಜರಿ)

ಶ್ರೀಮತಿ ಮನೋರಮಾ ಮಾಧ್ವರಾಜ್ (ಗೈರು ಹಾಜರಿ)

8 ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ರಸ್ತೆಯನ್ನು ಡಾಂಬರೀಕರಣ ಮಾಡುವುದರಲ್ಲಿ ವಿಳಂಬ ಮಾಡಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್. ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಮತಕ್ಷೇತ್ರದ ನಿಡಸೋಸಿ, ಅಮ್ಮಣಗಿ, ಯಾದ್‌ಗುಡ್ ಗೇಟ್‌ವರೆಗೆ ಡಾಂಬರೀಕರಣ ಮಂಜೂರಾಗಿದ್ದು ಕಳೆದ ವರ್ಷ ಆಯವ್ಯಯದಲ್ಲಿ ಈ ರಸ್ತೆಯ ಕೆಲಸವನ್ನು ಪೂರ್ಣ ಮಾಡುವುದಕ್ಕಾಗಿ ಹಣದ ವ್ಯವಸ್ಥೆ